ನಾನೇನು ಅಷ್ಟು ದೊಡ್ಡವಳಲ್ಲ... ಅರೇರೇ... ಚಿಗುರು ಮೀಸೆ ಬಂದಿದೆ... ಓಹೋ, ಸಚ್ಚಿ ಎಸ್ಸೆಸ್ಸೆಲ್ಸಿ ಮುಗಿಸೋ ಮೊದಲೇ ಗಂಡಸಾಗ್ಬಿಟ್ಟಿದ್ದೀಯಾ" ಎನ್ನುತ್ತಾ ಸಚ್ಚಿಯ ಮೀಸೆಯನ್ನೊಮ್ಮೆ ಸವರಿದ್ದಳು. ಸಚ್ಚಿಯ ಮೈಯೊಳಗೆ ವಿದ್ಯುತ್ ಸಂಚಾರ, ಅವನಿಗದು ಹೊಸದು. ಆ ಹೊಸದನ್ನು ಮನಸ್ಸು ಮತ್ತೊಮ್ಮೆ ಮಗದೊಮ್ಮೆ ಬೇಕೆಂದು ಬಯಸಿದರೂ ನಾಗಕ್ಕನ ಮುಖ ನೋಡಿದೊಡನೆ ನಾಚಿ ನೀರಾಗಿದ್ದ. ಎಲ್ಲರ ದೃಷ್ಟಿಯಲ್ಲಿ ಇನ್ನೂ ಚಿಕ್ಕ ಹುಡುಗನಾಗಿರುವ ತನ್ನನ್ನು ಮೊದಲ ಬಾರಿಗೆ, ಅದೂ ಮಾದಕ ಸುಂದರಿಯೊಬ್ಬಳು 'ಗಂಡಸು' ಎಂದು ಸಂಬೋಧಿಸಿದ್ದಕ್ಕೆ ತನ್ನಷ್ಟಕ್ಕೆ ಎದೆ ಉಬ್ಬಿ, ಭುಜ ಸೆಟೆದು ಕೊಂಡಿತ್ತು. ಆಮೇಲೆ...

"ಸಚ್ಚಿ... ಸ್ವಲ್ಪ ಏಳನ... ಪಪ್ಪನಿಗೆ ಸ್ಕ್ರ್ಯೂ ಡ್ರೈವರ್ ಸಿಗುತ್ತಿಲ್ಲವಂತೆ, ಹುಡುಕಿಕೊಡು ಬಾ..."

ನಾಗಕ್ಕನ ಕನಸಲ್ಲಿ ತೇಲಾಡುತ್ತಿದ್ದ ಸಚ್ಚಿಗೆ ರಸಭಂಗವಾಯಿತು. 'ಅವತ್ತು ಕೂಡ ಅಷ್ಟೆ, ನಾಗಕ್ಕ ಇನ್ನೇನು ಮುಟ್ಟುತ್ತಿದ್ದಳೋ ಏನೋ, ಈ ಅಮ್ಮನೇ ಕರೆದು ಎಲ್ಲವನ್ನು ಪಡ್ಚ ಮಾಡಿದ್ದು, ಕನಸಿನಲ್ಲಾದರೂ ಮುಂದುವರೆಯೋಣವೆಂದರೆ... ಇವತ್ತೂ ಕೂಡ... ಛೇ' ಎಂದುಕೊಳ್ಳುತ್ತ, ಕೈಯನ್ನು ರಭಸವಾಗಿ ನೆಲಕ್ಕೆ ಗುದ್ದಿ ಎದ್ದು ಕುಳಿತ.

ಗುದ್ದಿನ ಶಬ್ದಕ್ಕೆ ನಿದ್ದೆ ಬಾರದೆ ಒದ್ದಾಡುತ್ತಿದ್ದ ಪಾರುವಿಗೆ ದಿಗಿಲೆದ್ದು ಕತ್ತೆತ್ತಿ ಅಣ್ಣನನ್ನು ನೋಡಿದಳು.

ಅವಳನ್ನೊಮ್ಮೆ ಗುರಾಯಿಸಿ ನೋಡಿ, ಮೇಲಕ್ಕೆದ್ದು "ಮಲ್ಕೊಳೇ" ಎಂದು ಅವಳಿಗೆ ಒದ್ದು ಹೊರ ನಡೆದ ಸಚ್ಚಿ. ಒದೆತದ ನೋವಿಗೆ ಭಯ ಹೆಚ್ಚಿ, ಮತ್ತೆ ಚಾಪೆ ಒದ್ದೆಯಾಯಿತು. ಇದ್ಯಾವುದರ ಪರಿವೆಯೇ ಇಲ್ಲದೆ ಗೋಪು ಮೂಲೆಯಲ್ಲಿ ಗೊರಕೆಹೊಡೆಯುತ್ತಿದ್ದ.

ನಾಗಕ್ಕ ಎಂದರೆ ಯಾರೋ ದೊಡ್ಡ ಮನುಷ್ಯಳೇನಲ್ಲ. ಮನೆ ಮನೆಗೆ ತಿರುಗಿ ಮೀನು ಮಾರುವ ಕರಿಯಕ್ಕನ ಮಗಳು. ಕರಿಯಕ್ಕ ಹೆಸರಿಗೆ ತಕ್ಕಂತೆ ಕಪ್ಪೆ. ಆದರೆ, ಐವತ್ತರ ವಯಸ್ಸಿನಲ್ಲೂ ಸೂಜಿಗಲ್ಲಿನಂತೆ ಸೆಳೆಯುತ್ತಿದ್ದ ಅವಳ ಮುಖ ಲಕ್ಷಣ, ಮೈಮಾಟ, ದಶಕಗಳ ಹಿಂದೆ ಪಡ್ಡೆ ಹುಡುಗರ ನಿದ್ದೆಗೆಡಿಸಿದ್ದ ಕೃಷ್ಣ ಸುಂದರಿ ಇವಳು ಎಂಬುದನ್ನು ಸಾರಿ ಹೇಳುತ್ತಿದ್ದವು. ಇಂತಿಪ್ಪ ಕರಿಯಕ್ಕನಿಗೂ, ಪಾರುವಿನ ಅಜ್ಜಿಗೂ ಒಂಥರಾ ದೋಸ್ತಿ. ಅಂದರೆ, ಪ್ರೀತಿ ವಿಶ್ವಾಸದ ನೆರಳೂ ಇಲ್ಲದ, ಲೆಕ್ಕಾಚಾರದ ದೋಸ್ತಿ. ಮನೆಮನೆ ತಿರುಗಿ ಸುಸ್ತಾದಾಗ, ಒಂದೆರಡು ಕಿರಿ ಮೀನುಗಳ ಬದಲಿಗೆ, ಎಂಜಲು ಕೈಯಿಂದ ಕಾಗೆ ಓಡಿಸದ ಈ ಮುದುಕಿಯ ಕೈಯಿಂದ ಎಲೆ ಅಡಿಕೆ ಪಡೆದು, ಕೊಂಚ ಹೊತ್ತು ಅಲ್ಲೇ ದಣಿವಾರಿಸಿಕೊಳ್ಳಬಹುದು ಎಂಬ ಲೆಕ್ಕಾಚಾರ ಕರಿಯಕ್ಕನದ್ದಾದರೆ, 'ಇವಳನ್ನು ಮಾತಿನಿಂದ ಮರಳು ಮಾಡಿ, ಹೆಚ್ಚಿಗೆ ಮೀನು ಹಾಕಿಸಿಕೊಳ್ಳುವುದರ ಜೊತೆಗೆ, ಬೆಂಗ್ರೆಯ ತನ್ನ ದಾಯಾದಿಗಳ ಮನೆಯ ನಿತ್ಯ ಕಲಹವನ್ನು ಇವಳ ಬಾಯಿಯಿಂದ ರಸವತ್ತಾಗಿ ಕೇಳಿ, ಕಿವಿ ತಂಪು ಮಾಡಿಕೊಂಡರೆ ಗಂಟೇನು ಹೋಗುತ್ತದೆ. ಹೋದರೂ ಒಂದೆರಡು ಎಲೆ ಅಡಿಕೆ ತಾನೆ, ಅದೇನು ತಾನು ದುಡ್ಡುಕೊಟ್ಟು ತರುವುದಾ, ನಮ್ಮ ಬಾವಿಯಿಂದ ನೀರು ತೆಗೆದುಕೊಂಡು ಹೋಗುವ ಪಕ್ಕದ ಮನೆ ರಾಜಮ್ಮನಿಂದ ಪುಕ್ಕಟೆಯಾಗಿ ಪಡೆದದ್ದಲ್ಲವಾ' ಎಂಬುವುದು ಅಜ್ಜಿಯ ಲೆಕ್ಕಾಚಾರ. ಪಾರುವಿನ ಸೋದರತ್ತೆಗೆ ಒಳ್ಳೆಯ ವರ ಹುಡುಕಿಕೊಟ್ಟವಳು ಎಂಬ ಕಾರಣಕ್ಕೆ ಮನೆಯ ಗಂಡಸರೂ ಕರಿಯಕ್ಕನ ವಿಷಯದಲ್ಲಿ ಮೃದು. ದೂರದ ಬೆಂಗ್ರೆಯಿಂದ ವಾರಕ್ಕೆರಡು ಬಾರಿಯಾದರೂ ತಮ್ಮ ಮನೆಗೆ ಬಂದು, ಅಂಗಳದಲ್ಲಿ ಅಜ್ಜಿಯೊಂದಿಗೆ ಪಟ್ಟಾಂಗ ಹೊಡೆಯುತ್ತಾ, ತನ್ನ ಶಿರದ ಮೇಲಿನ ಹೇನುಗೂಡಿನಿಂದ ಆಗಾಗ ಹೇನುಗಳನ್ನು ಹೆಕ್ಕಿ 'ಚಿಟಿಕ್' ಎನಿಸುವ ಅವಳನ್ನು ಕಂಡರೆ ಮಕ್ಕಳಿಗೆ ಮಾತ್ರವಲ್ಲ ದೊಡ್ಡವರಿಗೂ 'ಇಶ್ಶಿ' ಎಂದೆನಿಸಿದರೂ, ಯಾರೂ ಕೂಡ, ''ಏನು ಕರಿಯಕ್ಕ ಚೆನ್ನಾಗಿದ್ದೀಯಾ?" ಎಂದು ಮಾತನಾಡಿಸದೆ ಇರುವುದಿಲ್ಲ.

"ಎಂಥ ಚೆನ್ನಾಗಿರುವುದು ಮಾರಾಯ್ರೆ, ನಮ್ಮ ನಾಗುವಿಗೆ ಒಂದು ಗಂಡು ಸಿಗುವ ವರೆಗೆ ನನಗೆ ಸುಖ ಉಂಟ ಹೇಳಿ?" ಎಂದು ಅಳು ಮೋರೆ ಹಾಕಿ, ರಾಗ ಎಳೆದು ಬಾರದ ಕಣ್ಣೀರನ್ನು, ಮೀನು